# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ನಿಧಿ-1 ಮತ್ತು ನಿಧಿ-3ರಲ್ಲಿ 2014-15ರಿಂದ 2018019ರವರೆಗಿನ ವೆಚ್ಚವಾಗದ ಅನುದಾನವನ್ನು ಮರುಮೌಲ್ಯೀಕರಿಸಿ ಒದಗಿಸುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಆಇ 437 ವೆಚ್ಚ 6/2016 ದಿನಾಂಕ:22.12.2016
2. ಸರ್ಕಾರದ ಆದೇಶ ಸಂಖ್ಯೆ: ಆಇ 405 ವೆಚ್ಚ 6/2019 ದಿನಾಂಕ:10.1.2020
3. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(1) ದಿನಾಂಕ:10.2.2020(ಜಿ.ಪಂ.ಹಾಸನ)
4. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(2) ದಿನಾಂಕ:10.2.2020(ಜಿ.ಪಂ.ರಾಯಚೂರು)
5. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(3) ದಿನಾಂಕ:17.2.2020 (ಜಿ.ಪಂ.ಧಾರವಾಡ)
6. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(4) ದಿನಾಂಕ:18.2.2020(ಜಿ.ಪಂ.ಚಿತ್ರದುರ್ಗ)
7. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(5) ದಿನಾಂಕ:1202.2020(ಜಿ.ಪಂ.ದಕ್ಷಿಣ ಕನ್ನಡ)
8. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(6) ದಿನಾಂಕ:10.2.2020(ಜಿ.ಪಂ.ದಾವಣಗೆರೆ)
9. ಸರ್ಕಾರದ ಆದೇಶ ಸಂಖ್ಯೆ: ಆಇ 34 ವೆಚ್ಚ 6/2020(7) ದಿನಾಂಕ:10.2.2020(ಜಿ.ಪಂ.ಉತ್ತರ ಕನ್ನಡ)
10. ಸರ್ಕಾರದ ಆದೇಶ ಸಂಖ್ಯೆ: ಆಇ 52 ವೆಚ್ಚ 6/2020(1) ದಿನಾಂಕ:3.3.2020(ಚಿತ್ರದುರ್ಗ ಜಿಲ್ಲೆ ತಾ.ಪಂ.)
11. ಸರ್ಕಾರದ ಆದೇಶ ಸಂಖ್ಯೆ: ಆಇ 52 ವೆಚ್ಚ 6/2020(2) ದಿನಾಂಕ:16.3.2020(ಬೆಂಗಳೂರು ಉತ್ತರ ತಾ.ಪಂ.)
12. ಸರ್ಕಾರದ ಆದೇಶ ಸಂಖ್ಯೆ: ಆಇ 52 ವೆಚ್ಚ 6/2020(3) ದಿನಾಂಕ:16.3.2020(ದಕ್ಷಿಣ ಕನ್ನಡ ಜಿಲ್ಲೆ ತಾ.ಪಂ.)
13. ಸರ್ಕಾರದ ಆದೇಶ ಸಂಖ್ಯೆ: ಆಇ 52 ವೆಚ್ಚ 6/2020(4) ದಿನಾಂಕ:10.2.2020(ಹಾಸನ ಜಿಲ್ಲೆ ತಾ.ಪಂ.)
14. ಸರ್ಕಾರದ ಆದೇಶ ಸಂಖ್ಯೆ: ಆಇ 52 ವೆಚ್ಚ 6/2020(5) ದಿನಾಂಕ:10.2.2020(ಬೆಂಗಳೂರು(ಗ್ರಾ)ಜಿಲ್ಲೆ ತಾ.ಪಂ.)
15. ಸರ್ಕಾರದ ಆದೇಶ ಸಂಖ್ಯೆ: ಆಇ 52 ವೆಚ್ಚ 6/2020(6) ದಿನಾಂಕ:23.3.2020(ಬೆಳಗಾವಿ ಜಿಲ್ಲೆ ತಾ.ಪಂ.)

ಪ್ರಸ್ತಾವನೆ:

ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ನಿಧಿ-1 ಮತ್ತು ನಿಧಿ-3ರಲ್ಲಿ 2014-15 ರಿಂದ 2018-19ರವರೆಗೆ ವೆಚ್ಚವಾಗದ ಅನುದಾನವನ್ನು ಮರು ಮೌಲ್ಯೀಕರಿಸಿ 2019-20ರಲ್ಲಿ ಲಭ್ಯಪಡಿಸುವಂತೆ ಮೇಲೆ (2)ರ ಸರ್ಕಾರದ ಆದೇಶದಲ್ಲಿ ಆದೇಶಿಸಿದಂತೆ ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ತಾಳೆಗೊಳಿಸಿ ಮೇಲೆ (3) ರಿಂದ (14)ರವರೆಗಿನ ಸರ್ಕಾರದ ಅದೇಶದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿ ನಿಧಿ-1 ಮತ್ತು ನಿಧಿ-3ರಲ್ಲಿನ ವೆಚ್ಚವಾಗದ ಅನುದಾನವನ್ನು ಲಭ್ಯಪಡಿಸುವಂತೆ ಆದೇಶಿಸಲಾಗಿದೆ. ಅದರಂತೆ ಖಜಾನೆ-2ರಲ್ಲಿ ಲಭ್ಯಪಡಿಸಿರುವ ಅನುದಾನದಲ್ಲಿ ನಿಧಿ-1ರಡಿ ಪ್ರಧಾನ ಲೆಕ್ಕ ಶೀರ್ಷಿಕೆ 2210 ಮತ್ತು 2211ರಡಿ ಹೊರತುಪಡಿಸಿ ಬೇರೆ ಲೆಕ್ಕ ಶೀರ್ಷಿಕೆಗಳಡಿ ವೆಚ್ಚಕ್ಕಾಗಿ ಸಲ್ಲಿಸುವ ಬಿಲ್ಲುಗಳನ್ನು ಖಜಾನೆಗಳಲ್ಲಿ ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿರುವ ಬಗ್ಗೆ ಖಾತರಿಪಡಿಸಿಕೊಂಡು ಪಾವತಿಗೆ ಕ್ರಮ ತೆಗೆದುಕೊಳ್ಳಲು ಹಾಗೂ ಈ ಬಗ್ಗೆ ಬೇರೆ ಯಾವುದೇ ಪಾವತಿಯನ್ನು ಮುಂದಿನ ಆದೇಶದವರೆಗೆ ಮಾನ್ಯ ಮಾಡದಿರುವ ಬಗ್ಗೆ ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

ಮುಂದುವರೆದಿದೆ..... . .

**ಸರ್ಕಾರದ ಆದೇಶ ಸಂಖ್ಯೆ: ಆಇ 90 ವೆಚ್ಚ 6/2020 ದಿನಾಂಕ:28.4.2020**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಬೆಂಗಳೂರು(ಗ್ರಾಮಾಂತರ), ಚಿಕ್ಕಮಗಳೂರು, ರಾಯಚೂರು, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳ ನಿಧಿ-1ರಡಿ 2014-15 ರಿಂದ 2018-19 ರವರೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ವೆಚ್ಚವಾಗದ ಅನುದಾನವನ್ನು ಮರು ಮೌಲ್ಯೀಕರಿಸಿ ಖಜಾನೆ-2ರಲ್ಲಿ ಲಭ್ಯಪಡಿಸಲಾಗಿದೆ. ಈ ರೀತಿ ಲಭ್ಯಪಡಿಸಿರುವ ಅನುದಾನದಲ್ಲಿ ನಿಧಿ-1ರಡಿ ಪ್ರಧಾನ ಲೆಕ್ಕ ಶೀರ್ಷಿಕೆ 2210 ಮತ್ತು 2211ರಡಿ ಬಾಕಿ ವೇತನ (**HRMS**ನಿಂದ ತಯಾರಿಸಿ, ಖಜಾನೆ-2ಕ್ಕೆ ಸಲ್ಲಿಸಲಾಗಿರುವ) ವೆಚ್ಚಕ್ಕಾಗಿ ಸಲ್ಲಿಸುವ ಬಿಲ್ಲುಗಳನ್ನು ಹೊರತುಪಡಿಸಿ ಯಾವುದೇ ಲೆಕ್ಕ ಶೀರ್ಷಿಕೆಗಳಡಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದಿರುವುದನ್ನು ಖಾತರಿಪಡಿಸಿಕೊಂಡು ಪಾವತಿಗೆ ಕ್ರಮ ತೆಗೆದುಕೊಳ್ಳಲು ಹಾಗೂ ಈ ಬಗ್ಗೆ ಯಾವುದೇ ಬೇರೆ ಪಾವತಿಯನ್ನು ಸೆಳೆಯಲು ಮುಂದಿನ ಆದೇಶದವರೆಗೆ ಖಜಾನೆಗಳಲ್ಲಿ ಮಾನ್ಯ ಮಾಡದಿರುವಂತೆ ಆದೇಶಿಸಿದೆ. ಇದನ್ನು ಈ ಕ್ಷಣದಿಂದ ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)

ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ,

ಆರ್ಥಿಕ ಇಲಾಖೆ

1. ಮಹಾಲೇಖಪಾಲರು (ಎ &ಇ) ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ,ಖಜಾನೆ-2, ವಾಣಿಜ್ಯತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು
4. ಆಯುಕ್ತರು, ಖಜಾನೆ ಆಯುಕ್ತಾಲಯ, ಬೆಂಗಳೂರು
5. ರಾಜ್ಯದ ಎಲ್ಲಾ ಎಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು.
6. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ ಖನಿಜ ಭವನ ಬೆಂಗಳೂರು.
7. ರಾಜ್ಯದ ಎಲ್ಲಾ ಎಲ್ಲಾ ಖಜಾನೆ ಅಧಿಕಾರಿಗಳು
8. ರಕ್ಷಾ ಕಡತ
9. ಹೆಚ್ಚುವರಿ ಪ್ರತಿ